**KAHV**210002472020

**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಬ್ಯಾಡಗಿ**

**ಉಪಸ್ಥಿತರುಃ- ಶ್ರೀ ಸುರೇಶ್ ವಗ್ಗನವರ**

ಎಂ.ಎ.,ಎಲ್. ಎಲ್.ಬಿ. , (ಸ್ಪೆ)

ಪ್ರ.ದ.ನ್ಯಾದಂ., ಬ್ಯಾಡಗಿ

**ದಿನಾಂಕ 02 ನೇ ಏಪ್ರಿಲ್- 2024**

**ಸಿ.ಸಿ.ನಂ.740/2022**

**ಫಿರ್ಯಾಧಿದಾರರು** : ಕರ್ನಾಟಕ ರಾಜ್ಯ, ಬ್ಯಾಡಗಿ ಪೋಲಿಸ್ ಠಾಣೆ, ಬ್ಯಾಡಗಿ.
(ಪ್ರತಿನಿಧಿಸುವವರು ಸಹಾಯಕ ಸರ್ಕಾರಿ ಅಭಿಯೋಜಕರು)

**ವಿರುದ್ಧ**

**ಆರೋಪಿತ**: ಬಸವರೆಡ್ಡಿ ಕೆಂಚಪ್ಪ ಕೆಂಚರೆಡ್ಡಿ
ವಯಾಃ 46 ವರ್ಷ, ಉದ್ಯೋಗಃ ಶೇತ್ಕಿರಿ,
ಸಾಃ ಕದರಮಂಡಲಗಿ, ತಾಃ ಬ್ಯಾಡಗಿ, ಜಿಃ ಹಾವೇರಿ.

**(ಪ್ರತಿನಿಧಿಸುವವರು ಶ್ರೀಮತಿ.ಎನ್.ಎಸ್.ಜೆ., ವಕೀಲರು)**

| | | |
|---|---|---|
| 1) ಅಪರಾಧ ಘಟಿಸಿದ ದಿನಾಂಕ | | 20.09.2022 |
| 2) ಅಪರಾಧ ವರದಿಯ ದಿನಾಂಕ | | 21.09.2022 |
| 3) ಫಿರ್ಯಾಧಿದಾರನ ಹೆಸರು | | ಶ್ರೀಮತಿ ಮಲ್ಲಮ್ಮ ಕೋಂ ಕೆಂಚಪ್ಪ ಕೆಂಚರೆಡ್ಡಿ |
| 4) ಆರೋಪಿತನ ದಸ್ತಗಿರಿಯಾದ ದಿನಾಂಕ | | -- |
| 5) ಆರೋಪಿತರ ಜಾಮೀನು ದಿನಾಂಕ | | -- |

| | | |
|---|---|---|
| 6) ಸಾಕ್ಷ್ಯದ ಅಭೀಲೇಖ ಪ್ರಾರಂಭದ ದಿನಾಂಕ | | 05.02.2024 |
| 7) ಸಾಕ್ಷ್ಯ ಅಭೀಲೇಖ ಮುಕ್ತಾಯದ ದಿನಾಂಕ | | 05.02.2024 |
| 8) ಆರೋಪಿಸಲಾದ ಅಪರಾಧಗಳು | | ಭಾರತ ದಂಡ ಸಂಹಿತೆ ಕಲಂಃ 323, 341, 504 ಮತ್ತು 506 |
| 9) ನ್ಯಾಯಾಲಯದ ಅಭಿಪ್ರಾಯ | | ಅಂತಿಮ ಆದೇಶದಂತೆ |

**ತೀರ್ಪು**

ಈ ಪ್ರಕರಣವನ್ನು ಪಿ.ಎಸ್.ಐ. ಬ್ಯಾಡಗಿ ಪೋಲಿಸರು ಆರೋಪಿತನ ವಿರುದ್ಧ ಭಾರತ ದಂಡ ಸಂಹಿತೆ ಕಲಂಃ 323, 341, 504 ಮತ್ತು 506 ರ ಅಡಿಯಲ್ಲಿ ಈ ದೋಷಾರೋಪಣ ಪತ್ರವನ್ನು ಸಲ್ಲಿಸಲಾಗಿದೆ.

**2. ಅಭಿಯೋಜನೆ ಪ್ರಕರಣದ ಸಂಕ್ಷಿಪ್ತ ಸಾರಾಂಶ ಈ ಕೆಳಗಿನಂತೆ ಇರುತ್ತದೆಃ**

ಬ್ಯಾಡಗಿ ಪೋಲೀಸ್ ಠಾಣೆಯ ಹದ್ದಿ ಪೈಕಿ ಬ್ಯಾಡಗಿ ತಾಲೂಕ ಕದರಮಂಡಲಗಿ ಗ್ರಾಮದಲ್ಲಿ ಪಿರ್ಯಾದಿ ಮತ್ತು ಆರೋಪಿತ ಇವರು ತಾಯಿ ಮತ್ತು ಮಗನಿದ್ದು, ಪಿರ್ಯಾದಿ ಮತ್ತು ಅವಳ ಗಂಡ ತನ್ನ ಎರಡನೇ ಮಗ ಚಾಸಾ-6 ನೇದವರ ಮನೆಯಲ್ಲಿ ವಾಸವಾಗಿದ್ದು, ಆ ಕಾಲಕ್ಕೆ ಪಿರ್ಯಾದಿಯ ಸಂಗಡ ಅವಳ ಗಂಡ ತಂಟೆ ಮಾಡಿದ್ದರಿಂದ ಚಾಸಾ-6 ನೇದವರು ಪಿರ್ಯಾದಿಯ ಗಂಡನಿಗೆ ನೀನು ತಂಟೆ ಮಾಡುವುದಾದರೆ ನಮ್ಮ ಮನೆಯಲ್ಲಿ ಇರಬೇಡ ಅಂತಾ ಹೇಳಿದ್ದಕ್ಕೆ ಸಿಟ್ಟಾದ ಪಿರ್ಯಾದಿಯ ಗಂಡ ಮನೆ ಬಿಟ್ಟು ಹೋಗಿ ತನ್ನ ಹಿರಿಯ ಮಗ ಆರೋಪಿತನ ಮನೆಗೆ ಹೋಗಿ ಪಿರ್ಯಾದಿಗೆ ಕರೆದುಕೊಂಡು ಬಾ ನಾವು ಇಲ್ಲಿ

ಇರುತ್ತೇವೆ ಅಂತಾ ಹೇಳಿದಾಗ ದಿನಾಂಕಃ 20.09.2022 ರಂದು ಮಧ್ಯಾಹ್ನ 1.30 ಗಂಟೆ ಸುಮಾರಿಗೆ ಆರೋಪಿತನು ಪಿರ್ಯಾದಿಯು ಕೆಲಸ ಮಾಡುತ್ತಿದ್ದ ಚಾಸಾ-6 ನೇದವರ ಹೊಲಕ್ಕೆ ಹೋಗಿ ಪಿರ್ಯಾದಿಗೆ ನಿನ್ನ ತಾಯಿನ ಹಡಾ ನೀನು ನಮ್ಮ ಮನೆಯಲ್ಲಿ ಇರು ಬಾ ಅಂತಾ ಅವಾಚ್ಯಶಬ್ದಗಳಿಂದ ಬೈಯ್ದಾಡುತ್ತಾ ಕೈಯಿಂದ ಮೈಮೇಲೆ ಹೊಡೆದಿದ್ದು ಆಗ ಪಿರ್ಯಾದಿಯು ಹೊಡೆತ ತಾಳಲಾರದೆ ತಪ್ಪಿಸಿಕೊಂಡು ಹೊರಟಾಗ ಆರೋಪಿತನು ಪಿರ್ಯಾದಿಗೆ ಮುಂದೆ ಹೋಗದಂತೆ ಅಡ್ಡಗಟ್ಟಿ ತರುಬಿ ಕೈಯಿಂದ ಹೊಡೆದು ಸಾದಾ ಸ್ವರೂಪದ ದುಃಖಾಪತ್ತಪಡಿಸಿದ್ದಲ್ಲದೆ, ನೀನು ನನ್ನ ಮನೆಗೆ ಬಾರದೆ ಹೋದರೆ ನಿನಗೆ ಹೊಡೆದು ಕೊಂದು ಬಿಡುತ್ತೇನೆ ಅಂತಾ ಜೀವದ ಬೆದರಿಕೆ ಹಾಕಿರುತ್ತಾನೆಂದು ಆರೋಪಿತನ ವಿರುದ್ಧ ಫಿರ್ಯಾಧಿ ಇರುತ್ತದೆ.

**3.** ಚಾಸಾ-1 ರವರು ಸಲ್ಲಿಸಿದ ಪ್ರಥಮ ಮಾಹಿತಿ ಮೇರೆಗೆ ಬ್ಯಾಡಗಿ ಪೋಲಿಸ್ ಠಾಣೆಯವರು ಗುನ್ನಾ ಸಂಖ್ಯೆಃ 166/2022 ರಂತೆ ಪ್ರಕರಣವನ್ನು ದಾಖಲಿಸಿರುತ್ತಾರೆ.

**4.** ಚಾಸಾ-11 ರವರು ಪ್ರಕರಣದ ತನಿಖೆಯನ್ನು ಪೂರ್ಣಗೊಳಿಸಿ ದೋಷಾರೋಪಣಾ ಪತ್ರವನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತಾರೆ .

**5.** ದೋಷಾರೋಪಣೆಯನ್ನು ಸಲ್ಲಿಸಿದ ನಂತರ ಈ ನ್ಯಾಯಾಲಯದಿಂದ ಆರೋಪಿತನ ವಿರುದ್ಧ ಅಪರಾಧಗಳ ಬಗ್ಗೆ ಸಂಜ್ಞೆಯನ್ನು ತೆಗೆದುಕೊಳ್ಳಲಾಯಿತು.

**6.** ಆರೋಪಿತನು ಜಾಮೀನಿನ ಮೇಲೆ ಇರುತ್ತಾನೆ. ನಂತರ ಆರೋಪಿತನಿಗೆ ದಂಡ ಪ್ರಕ್ರಿಯಾ ಸಂಹಿತೆಯ ಕಲಂ 207 ರ ಪ್ರಕಾರ ಅಭಿಯೋಜನೆ ಪ್ರಕರಣದ ದಾಖಲೆಗಳ ನಕಲುಗಳನ್ನು ನೀಡಲಾಯಿತು.

**7.** ದೋಷಾರೋಪಣೆಯನ್ನು ರಚಿಸುವ ಮುನ್ನ ಅಭಿಯೋಜನೆ ಮತ್ತು ಆರೋಪಿತನ ಅಹವಾಲುಗಳನ್ನು ಕೇಳಿದ ನಂತರ ಆರೋಪಿತನ ಮೇಲೆ ಮಾಡಲಾದ ಆರೋಪಗಳು ನಿರಾಧಾರ ಎಂದು ಕಂಡು ಬರದೇ ಇರುವುದರಿಂದ ಮೇಲ್ಕಂಡ ಅಪಾದನೆಗಾಗಿ ದೋಷಾರೋಪಣೆಯನ್ನು ರಚಿಸಿ , ಓದಿ, ಹೇಳಿ ವಿವರಿಸಲಾಯಿತು. ಆರೋಪಿತನು ತನ್ನ ವಿರುದ್ಧ ಮಾಡಲಾದ ಆರೋಪಗಳನ್ನು ಅಲ್ಲಗಳೆದು ತಾನು ಯಾವುದೇ ತಪ್ಪು ಮಾಡಿರುವುದಿಲ್ಲ ಎಂದು ಹೇಳಿ ವಿಚಾರಣೆಯಾಗಲು ವಿನಂತಿಸಿರುತ್ತಾರೆ.

**8.** ಅಭಿಯೋಜನೆಯು ತನ್ನ ಪ್ರಕರಣವನ್ನು ಸಾಭೀತುಪಡಿಸಲು ಒಂದು ಸಾಕ್ಷಿದಾರರನ್ನು ಅಂದರೆ ಫ಼ಾಸಾ -1 ರವರನ್ನು ವಿಚಾರಿಸಿಕೊಂಡಿದೆ ಮತ್ತು ದಾಖಲಾತಿಗಳನ್ನು ನಿಪಿ-1 ರಿಂದ ನಿಪಿ-5 ಎಂದು ಗುರುತಿಸಿಕೊಂಡಿರುತ್ತದೆ. ನಂತರ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರು ದೋಷಾರೋಪಣ ಪಟ್ಟಿಯಲ್ಲಿ ಹೆಸರಿಸಿದ ಉಳಿದ ಸಾಕ್ಷ್ಯದಾರರಿಗೆ ಸಮನ್ಸ್ ಕಳುಹಿಸಲು ಕೋರಿಕೊಂಡರು . ಆದರೆ ಫ಼ಾಸಾ-1 ರವರು ಈ ಪ್ರಕರಣದ ಆರೋಪಿತನ ವಿರುದ್ಧವಾಗಿ ಯಾವುದೇ ಸಾಕ್ಷ್ಯ

ನುಡಿಯದೇ ಇದ್ದುದರಿಂದ ಉಳಿದ ಸಾಕ್ಷ್ಯದಾರರನ್ನು ವಿಚಾರಣೆ ಮಾಡಿದರೂ ಸಹ ಅಭಿಯೋಜನೆಗೆ ಯಾವುದೇ ಪ್ರಯೋಜನವಾಗುವುದಿಲ್ಲವೆಂದು ತೀರ್ಮಾನಿಸಿ ಅವರ ಕೋರಿಕೆಯನ್ನು ತಿರಸ್ಕರಿಸಿ ಅಭಿಯೋಜನೆಯ ಪರ ಸಾಕ್ಷ್ಯವನ್ನು ಮುಕ್ತಾಯಗೊಳಿಸಲಾಯಿತು.

**9.** ಅಭಿಯೋಜನೆ ಪರ ಸಾಕ್ಷ್ಯದಲ್ಲಿ ಆರೋಪಿತನ ವಿರುದ್ಧ ಯಾವುದೇ ಸಾಕ್ಷ್ಯ ಲಭ್ಯವಿಲ್ಲದೇ ಇರುವುದರಿಂದ ಕಲಂ 313 ದಂಡ ಪ್ರಕ್ರಿಯಾ ಸಂಹಿತೆ ಅಡಿಯಲ್ಲಿ ದಾಖಲಿಸಬೇಕಾದ ಆರೋಪಿತನ ಹೇಳಿಕೆಯಿಂದ ವಿನಾಯಿತಿ ನೀಡಲಾಯಿತು.

**10.** ಮಾನ್ಯ ಸಹಾಯಕ ಸರಕಾರಿ ಅಭಿಯೋಜಕರ ಹಾಗೂ ಮಾನ್ಯ ಆರೋಪಿತನ ಪರ ವಕೀಲರ ವಾದ-ವಿವಾದಗಳನ್ನು ಆಲಿಸಲಾಯಿತು. ಕಡತದಲ್ಲಿ ಲಭ್ಯವಿದ್ಧ ದಾಖಲಾತಿಗಳನ್ನು ಮತ್ತು ಸಾಕ್ಷ್ಯಾಧಾರಗಳನ್ನು ಪರಿಶೀಲಿಸಲಾಯಿತು.

**11.** ಮೇಲ್ಕಂಡ ಕಾರಣಗಳಿಂದ ಈ ಕೆಳಗಿನ ಅಂಶಗಳು ನನ್ನ ಪರ್ಯಾಲೋಚನೆಗೆ ಉದ್ಭವಿಸುತ್ತವೆಃ

**ಅಂಶಗಳು**

| | |
|---|---|
| 1. | ಬ್ಯಾಡಗಿ ಪೋಲೀಸ್ ಠಾಣೆಯ ಹದ್ದಿ ಪೈಕಿ ಬ್ಯಾಡಗಿ ತಾಲೂಕ ಕದರಮಂಡಲಗಿ ಗ್ರಾಮದಲ್ಲಿ ಪಿರ್ಯಾದಿ ಮತ್ತು ಆರೋಪಿತ ಇವರು ತಾಯಿ ಮತ್ತು ಮಗನಿದ್ದು, ಪಿರ್ಯಾದಿ ಮತ್ತು ಅವಳ ಗಂಡ ತನ್ನ ಎರಡನೇ ಮಗ ಚಾಸಾ-6 ನೇದವರ ಮನೆಯಲ್ಲಿ ವಾಸವಾಗಿದ್ದು, ಆ |

| | |
|---|---|
| | ಕಾಲಕ್ಕೆ ಪಿರ್ಯಾದಿಯ ಸಂಗಡ ಅವಳ ಗಂಡ ತಂಟೆ ಮಾಡಿದ್ದರಿಂದ ಚಾಸಾ-6 ನೇದವರು ಪಿರ್ಯಾದಿಯ ಗಂಡನಿಗೆ ನೀನು ತಂಟೆ ಮಾಡುವುದಾದರೆ ನಮ್ಮ ಮನೆಯಲ್ಲಿ ಇರಬೇಡ ಅಂತಾ ಹೇಳಿದ್ದಕ್ಕೆ ಸಿಟ್ಟಾದ ಪಿರ್ಯಾದಿಯ ಗಂಡ ಮನೆ ಬಿಟ್ಟು ಹೋಗಿ ತನ್ನ ಹಿರಿಯ ಮಗ ಆರೋಪಿತನ ಮನೆಗೆ ಹೋಗಿ ಪಿರ್ಯಾದಿಗೆ ಕರೆದುಕೊಂಡು ಬಾ ನಾವು ಇಲ್ಲಿ ಇರುತ್ತೇವೆ ಅಂತಾ ಹೇಳಿದಾಗ ದಿನಾಂಕಃ 20.09.2022 ರಂದು ಮಧ್ಯಾಹ್ನ 1.30 ಗಂಟೆ ಸುಮಾರಿಗೆ ಆರೋಪಿತನು ಪಿರ್ಯಾದಿಯು ಕೆಲಸ ಮಾಡುತ್ತಿದ್ದ ಚಾಸಾ-6 ನೇದವರ ಹೊಲಕ್ಕೆ ಹೋಗಿ ಪಿರ್ಯಾದಿಗೆ ಕೈಯಿಂದ ಮೈಮೇಲೆ ಹೊಡೆದಿದ್ದಾನೆಂದು ಅಭಿಯೋಜನೆಯು ಸಂಶಯಾತೀತವಾಗಿ ಸಾಭೀತು ಪಡಿಸುತ್ತದೆಯೇ ? |
| 2. | ಎರಡನೇಯದಾಗಿ, ಮೇಲ್ಕಂಡ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತನು ಪಿರ್ಯಾದಿಗೆ ಮುಂದೆ ಹೋಗದಂತೆ ಅಡ್ಡಗಟ್ಟಿ ತರುಬಿದ್ದಾನೆಂದು ಅಭಿಯೋಜನೆಯು ಸಂಶಯಾತೀತವಾಗಿ ಸಾಭೀತು ಪಡಿಸುತ್ತದೆಯೇ ? |
| 3. | ಮೂರನೇಯದಾಗಿ, ಮೇಲ್ಕಂಡ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತನು ಪಿರ್ಯಾದಿಗೆ ನಿನ್ನ ತಾಯಿನ ಹಡಾ ನೀನು ನಮ್ಮ ಮನೆಯಲ್ಲಿ ಇರು ಬಾ ಅಂತಾ ಅವಾಚ್ಯಶಬ್ದಗಳಿಂದ ಬೈಯ್ದಾಡಿದ್ದಾನೆಂದು ಅಭಿಯೋಜನೆಯು ಸಂಶಯಾತೀತವಾಗಿ ಸಾಭೀತು ಪಡಿಸುತ್ತದೆಯೇ ? |
| 4. | ನಾಲ್ಕನೇಯದಾಗಿ, ಮೇಲ್ಕಂಡ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತನು ಪಿರ್ಯಾದಿಗೆ ನೀನು ನನ್ನ ಮನೆಗೆ ಬಾರದೆ ಹೋದರೆ ನಿನಗೆ ಹೊಡೆದು ಕೊಂದು ಬಿಡುತ್ತೇವೆ ಅಂತಾ ಜೀವದ ಬೆದರಿಕೆ |

| | |
|---|---|
| | ಹಾಕಿರುತ್ತಾನೆಂದು ಅಭಿಯೋಜನೆಯು ಸಂಶಯಾತೀತವಾಗಿ ಸಾಭೀತು ಪಡಿಸುತ್ತದೆಯೇ ? |
| 5. | ಏನು ಆದೇಶ? |

**12.** ಈ ಮೇಲಿನ ಅಂಶಗಳಿಗೆ ಈ ಕೆಳಕಂಡ ಕಾರಣಗಳಿಗಾಗಿ ನನ್ನ ಉತ್ತರಗಳು ಈ ಕೆಳಗಿನಂತೆ ಇರುತ್ತವೆ.

ಅಂಶ ನಂ.1 ರಿಂದ 4: ನಕಾರಾತ್ಮಕವಾಗಿ.

ಅಂಶ ನಂ.5 : ಅಂತಿಮ ಆದೇಶದಂತೆ ಕೆಳಗಿನ ಕಾರಣಗಳಿಗಾಗಿಃ

-: **ಕಾರಣಗಳು** :-

**13. ಅಂಶ ನಂ.1 ರಿಂದ 4:-** ಅ) ಈ ನಾಲ್ಕು ಅಂಶಗಳು ಒಂದಕ್ಕೊಂದು ಸಂಬಂಧಪಟ್ಟವುಗಳಾಗಿರುವುದರಿಂದ ಸಾಕ್ಷ್ಯದ ವಿಶ್ಲೇಷಣೆಯ ಪುನರಾವರ್ತನೆಯನ್ನು ತಪ್ಪಿಸುವ ಸಲುವಾಗಿ ಅವುಗಳನ್ನು ಜೊತೆ-ಜೊತೆಯಾಗಿ ಪರಿಗಣನೆಗೆ ತೆಗೆದುಕೊಳ್ಳಲಾಯಿತು.

ಬಿ) ಅಭಿಯೋಜನೆಯ ನಿಲುವಿನ ಪ್ರಕಾರ ಆರೋಪಿತನು ಭಾರತ ದಂಡ ಸಂಹಿತೆ ಕಲಂಃ 323, 341, 504 ಮತ್ತು 506 ರಡಿಯಲ್ಲಿ ಶಿಕ್ಷಾರ್ಹ ಅಪರಾಧಗಳನ್ನು ಎಸಗಿರುತ್ತಾನೆ. ಫಿರ್ಯಾಧಿಯು ಅಂಶಗಳನ್ನು ಸಾಭೀತುಪಡಿಸುವ ಸಲುವಾಗಿ ವಿಚಾರಣೆ ಮಾಡಿಕೊಂಡಿರುವ ಸಾಕ್ಷಿಗಳಲ್ಲಿ ಫ್ರಾಸಾ-

1 ಪಿರ್ಯಾದಿ ಸಾಕ್ಷಿದಾರರಾಗಿ ಗುರುತಿಸಿಕೊಂಡಿರುತ್ತಾರೆ . ಈ ಸಾಕ್ಷಿದಾರರು ಅಭಿಯೋಜನಾ ಸಾಕ್ಷ್ಯಕ್ಕೆ ಪ್ರತಿಕೂಲ ಸಾಕ್ಷಿಯನ್ನು ನುಡಿದಿರುತ್ತಾರೆ.

**ಸಿ)** ಫ್ರಾಸಾ -1 ರವರು ನ್ಯಾಯಾಲಯಕ್ಕೆ ಸಾಕ್ಷಿ ನುಡಿಯುತ್ತಾ, ಆರೋಪಿತನು ತನ್ನ ಮಗನಾಗಬೇಕು, ಚಾಸಾ-6 ತನ್ನ ಮಗನಾಗಬೇಕು, ಚಾಸಾ-2 ರಿಂದ 5 ತನಗೆ ಪರಿಚಯಸ್ಥರು ಇರುತ್ತಾರೆ, ಈ ಪ್ರಕರಣದ ಬಗ್ಗೆ ತನಗೆ ಯಾವುದೇ ಮಾಹಿತಿ ಇರುವುದಿಲ್ಲ, ಪೊಲೀಸರಿಗೆ ದೂರನ್ನು ನೀಡಿರುವುದಿಲ್ಲ , ತನ್ನ ಸಮಕ್ಷಮ ಯಾವುದೇ ಪಂಚನಾಮೆ ಮಾಡಿ, ಭಾವಚಿತ್ರಗಳನ್ನು ತೆಗೆದಿರುವುದಿಲ್ಲವೆಂದು ತಮ್ಮ ಸಾಕ್ಷ್ಯ ನುಡಿದಿರುತ್ತಾರೆ . ಈ ಸಾಕ್ಷಿದಾರರನ್ನು ನ್ಯಾಯಾಲಯವು ಪ್ರತಿಕೂಲ ಸಾಕ್ಷಿದಾರರು ಎಂದು ಪರಿಗಣಿಸಿ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಗೆ ಪಾಟೀ ಸವಾಲು ಮಾಡಲು ಅನುಮತಿ ನೀಡಿದಾಗ ಅಭಿಯೋಜನೆಯವರು ತಮ್ಮ ಪ್ರಕರಣದ ಸಂಗತಿಗಳಿಗೆ ಅನುಗುಣವಾಗಿ ಬ್ಯಾಡಗಿ ಪೋಲೀಸ್ ಠಾಣೆಯ ಹದ್ದಿ ಪೈಕಿ ಬ್ಯಾಡಗಿ ತಾಲೂಕ ಕದರಮಂಡಲಗಿ ಗ್ರಾಮದಲ್ಲಿ ಪಿರ್ಯಾದಿ ಮತ್ತು ಆರೋಪಿತನು ತಾಯಿ ಮತ್ತು ಮಗನಿದ್ದು, ಪಿರ್ಯಾದಿ ಮತ್ತು ಅವಳ ಗಂಡ ತನ್ನ ಎರಡನೇ ಮಗ ಚಾಸಾ-6 ನೇದವರ ಮನೆಯಲ್ಲಿ ವಾಸವಾಗಿದ್ದು, ಆ ಕಾಲಕ್ಕೆ ಪಿರ್ಯಾದಿಯ ಸಂಗಡ ಅವಳ ಗಂಡ ತಂಟೆ ಮಾಡಿದ್ದರಿಂದ ಚಾಸಾ-6 ನೇದವರು ಪಿರ್ಯಾದಿಯ ಗಂಡನಿಗೆ ನೀನು ತಂಟೆ ಮಾಡುವುದಾದರೆ ನಮ್ಮ ಮನೆಯಲ್ಲಿ ಇರಬೇಡ ಅಂತಾ ಹೇಳಿದ್ದಕ್ಕೆ ಸಿಟ್ಟಾದ ಪಿರ್ಯಾದಿಯ ಗಂಡ ಮನೆ ಬಿಟ್ಟು ಹೋಗಿ ತನ್ನ ಹಿರಿಯ ಮಗ ಆರೋಪಿತನ ಮನೆಗೆ ಹೋಗಿ ಪಿರ್ಯಾದಿಗೆ

ಕರೆದುಕೊಂಡು ಬಾ ನಾವು ಇಲ್ಲಿ ಇರುತ್ತೇವೆ ಅಂತಾ ಹೇಳಿದಾಗ ದಿನಾಂಕಃ 20.09.2022 ರಂದು ಮಧ್ಯಾಹ್ನ 1.30 ಗಂಟೆ ಸುಮಾರಿಗೆ ಆರೋಪಿತನು ಪಿರ್ಯಾದಿಯು ಕೆಲಸ ಮಾಡುತ್ತಿದ್ದ ಚಾಸಾ-6 ನೇದವರ ಹೊಲಕ್ಕೆ ಹೋಗಿ ಪಿರ್ಯಾದಿಗೆ ನಿನ್ನ ತಾಯಿನ ಹಡಾ ನೀನು ನಮ್ಮ ಮನೆಯಲ್ಲಿ ಇರು ಬಾ ಅಂತಾ ಅವಾಚ್ಯಶಬ್ದಗಳಿಂದ ಬೈಯ್ದಾಡುತ್ತಾ ಕೈಯಿಂದ ಮೈಮೇಲೆ ಹೊಡೆದಿದ್ದು ಆಗ ಪಿರ್ಯಾದಿಯು ಹೊಡೆತ ತಾಳಲಾರದೆ ತಪ್ಪಿಸಿಕೊಂಡು ಹೊರಟಾಗ ಆರೋಪಿತನು ಪಿರ್ಯಾದಿಗೆ ಮುಂದೆ ಹೋಗದಂತೆ ಅಡ್ಡಗಟ್ಟಿ ತರುಬಿ ಕೈಯಿಂದ ಹೊಡೆದು ಸಾದಾ ಸ್ವರೂಪದ ದುಃಖಾಪತ್ತಪಡಿಸಿದ್ದಲ್ಲದೆ, ನೀನು ನನ್ನ ಮನೆಗೆ ಬಾರದೆ ಹೋದರೆ ನಿನಗೆ ಹೊಡೆದು ಕೊಂದು ಬಿಡುತ್ತೇನೆ ಅಂತಾ ಜೀವದ ಬೆದರಿಕೆ ಹಾಕಿರುತ್ತಾನೆಂಬ ಎಲ್ಲಾ ಸೂಚನೆಗಳನ್ನು ಸೂಚಿಸಿದ್ದರೂ ಸಹ ಸಾಕ್ಷಿದಾರರು ಅಲ್ಲಗಳೆದಿರುತ್ತಾರೆ. ಈ ಸಾಕ್ಷಿದಾರರು ಆರೋಪಿತನಿಗೆ ಸಹಾಯ ಮಾಡಲು ಸುಳ್ಳು ನುಡಿದಿದ್ದಾರೆ ಎಂದು ನಂಬಲು ಯಾವುದೇ ಬಲವಾದ ಸಾಕ್ಷ್ಯವು ನ್ಯಾಯಾಲಯದ ಮುಂದೆ ಕಂಡು ಬಂದಿರುವುದಿಲ್ಲ.

**14.** ಆದ್ದರಿಂದ ನ್ಯಾಯಾಲಯದ ಮುಂದೆ ಆರೋಪಿತನು ಅಪರಾಧ ಮಾಡಿದ ಬಗ್ಗೆ ತನಿಖಾಧಿಕಾರಿ ಹಾಜರುಪಡಿಸಿದ ಸಾಕ್ಷಿದಾರರ ಪೈಕಿ ಯಾವುದೇ ನೇರ ಅಥವಾ ಸಾಂದರ್ಭಿಕ ಸಾಕ್ಷ್ಯಾಧಾರಗಳು ಕಂಡು ಬಂದಿರುವುದಿಲ್ಲ . ಇದರಲ್ಲಿ ಮುಖ್ಯವಾಗಿ ಗಮನಿಸಬೇಕಾದ ಅಂಶಗಳು ಏನೆಂದರೆ, ಅಭಿಯೋಜನೆಯು ಹಾಜರುಪಡಿಸಿದ ಸಾಕ್ಷಿದಾರರ ಪೈಕಿ ಘಟನೆಯು ನಡೆದ ಬಗ್ಗೆ, ಆರೋಪಿತನ ಮೇಲೆ ಹೊರಿಸಲಾದ

ಆರೋಪ ಪಟ್ಟಿಯ ಯಾವುದೇ ಅಂಶವನ್ನು ಅಭಿಯೋಜನೆಯು ಸಾಭೀತುಪಡಿಸಿರುವುದಿಲ್ಲ.

**15.** ಒಂದು ಅಪರಾದ ರುಜುವಾತು ಆಗಬೇಕಾದರೆ ಮೌಖಿಕ ಸಾಕ್ಷ್ಯ ಮತ್ತು ಕಡತದಲ್ಲಿ ಲಭ್ಯವಿದ್ದ ದಾಖಲಾತಿ ಸಾಕ್ಷ್ಯಗಳು ಸಂಪೂರ್ಣವಾಗಿ ಅಪರಾಧಿತ್ವವನ್ನು ಬೆಂಬಲಿಸಬೇಕು. ಈ ಪ್ರಕರಣದಲ್ಲಿ ಫ್ರಾಸಾ -1 ರವರು ಅಭಿಯೋಜನೆಗೆ ವಿರುದ್ಧವಾಗಿ ಸಾಕ್ಷ್ಯವನ್ನು ನುಡಿದಿರುತ್ತಾರೆ . ಒಟ್ಟಾರೆಯಾಗಿ ನುಡಿದ ಸಾಕ್ಷ್ಯವನ್ನು ಗಮನಿಸಿದಾಗ ಈ ನ್ಯಾಯಾಲಯಕ್ಕೆ ಸ್ಪಷ್ಟವಾಗಿ ಕಂಡು ಬರುವುದೇನೆಂದರೆ , ಆರೋಪಿತನು ಯಾವುದೇ ತಪ್ಪು ಮಾಡಿರುವುದಿಲ್ಲ ಎಂದು ಕಂಡು ಬರುತ್ತದೆ . ಆದ್ದರಿಂದ ಅಭಿಯೋಜನೆಯವರು ಹಾಜರುಪಡಿಸಿದ ಸಾಕ್ಷಿದಾರರು ವಿರುದ್ಧವಾಗಿ ನುಡಿದಿದ್ದು ತಮ್ಮ ಅಂಶಗಳನ್ನು ಪೂರಕ ಸಾಕ್ಷ್ಯಾಧಾರಗಳ ಅನುಪಸ್ಥಿತಿಯಲ್ಲಿ ಸಾಭೀತುಪಡಿಸಿರುವುದಿಲ್ಲ. ಆರೋಪಿತನು ತಪಿತಸ್ಥನು ಎಂಬ ಬಗ್ಗೆ ಸಾಕ್ಷಿದಾರರ ಸಾಕ್ಷ್ಯದಲ್ಲಿ ಇರುವ ಅಂಶಗಳ ಪೈಕಿ ಯಾವುದೇ ಪೂರಕ ಸಾಕ್ಷ್ಯಾಧಾರಗಳು ನ್ಯಾಯಾಲಯದ ಮುಂದೆ ಲಭ್ಯವಿರುವುದಿಲ್ಲ . ಕಾರಣ ಪೂರಕ ಸಾಕ್ಷ್ಯಾಧರಗಳ ಅನುಪಸ್ಥಿತಿಯಲ್ಲಿ ಅಭಿಯೋಜನೆಯ ನಿಲುವನ್ನು ನಂಬಲು ಕಷ್ಟಸಾಧ್ಯವಾಗುತ್ತದೆ.

**16.** ಫ್ರಾಸಾ-1 ರವರ ಸಾಕ್ಷ್ಯವನ್ನು ಮತ್ತು ಪಾಟೀ ಸವಾಲಿನ ಹೇಳಿಕೆಗಳನ್ನು ಸೂಕ್ಷ್ಮವಾಗಿ ಗಮನಿಸಿದಾಗ ಕಂಡು ಬರುವುದೇನೆಂದರೆ , ಸಾಕ್ಷ್ಯದ ಜಂಟಿಗಳು

ಒಂದಕ್ಕೊಂದು ಹೊಂದಾಣಿಕೆ ಇಲ್ಲದೆ ಕಳಚಿ ಬಿದ್ದಿರುತ್ತವೆ . ಅಪರಾಧಿಕ ಕಾನೂನಿನ ಮುಖ್ಯ ತತ್ವದ ಪ್ರಕಾರ ಹಲವಾರು ತಪಿತಸ್ಥ ವ್ಯಕ್ತಿಗಳು ಬಿಡುಗಡೆಯಾಗುವುದಕ್ಕಿಂತ ಒಬ್ಬ ನಿರಪರಾಧಿ ದಂಡನೆಗೆ ಗುರಿಯಾಗತಕ್ಕದಲ್ಲ ಎಂಬ ನಿಯಮಯವನ್ನು ಗಮನದಲ್ಲಿಟ್ಟುಕೊಂಡು ಅಭಿಯೋಜನೆಯು ಅಪರಾಧದ ವಸ್ತು -ವಿಷಯವನ್ನು ಸ್ಪಷ್ಟವಾಗಿ ಮತ್ತು ಖಚಿತವಾಗಿ ರುಜುವಾತುಪಡಿಸಲು ವಿಫಲವಾಗಿದೆ . ಆದ್ದರಿಂದ ಆರೋಪಿತನಿಗೆ ಸಂಶಯದ ಬೆಳಕಿನ ಲಾಭವನ್ನು ಕೊಡುವುದು ಸೂಕ್ತ ಎಂದು ತೀರ್ಮಾನಿಸಿ, ಈ ಮೇಲೆ ಹೇಳಿದ **ಅಂಶ ನಂಃ1 ರಿಂದ 4 ರವರಗೆ ನಕಾರಾತ್ಮಕವಾಗಿ ಉತ್ತರಿಸಿದ್ದೇನೆ**.

**17. ಅಂಶ ನಂ.5:-** ಈ ಮೇಲಿನ ಅಂಶ ನಂ.1 ರಿಂದ 4 ರಲ್ಲಿ ವಿವರಿಸಿದ ಕಾರಣಗಳಿಂದ ಹಾಗೂ ನಾನು ಹೊಂದಿದ ಸ್ಪಷ್ಟ ಮತ್ತು ಖಚಿತ ಅಭಿಪ್ರಾಯದ ಮೇರೆಗೆ ಈ ಕೆಳಗಿನಂತೆ ಆದೇಶ ಮಾಡಿರುತ್ತೇನೆಃ

## ಆ ದೇ ಶ

ದಂಡ ಪ್ರಕ್ರಿಯಾ ಸಂಹಿತೆ ಕಲಂ 248(1) ರ ಅಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸುತ್ತಾ ಆರೋಪಿತನನ್ನು ಭಾರತ ದಂಡ ಸಂಹಿತೆ ಕಲಂ.323, 341, 504 ಮತ್ತು 506 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧಗಳ ಬಾಬ್ತು ನಿರ್ದೋಷಿ ಎಂದು ತೀರ್ಮಾನಿಸಿ ಬಿಡುಗಡೆಗೊಳಿಸುತ್ತಿದ್ದೇನೆ.

ಆರೋಪಿತನ ಮತ್ತು ಜಾಮೀನುದಾರರು ಬರೆದು ಕೊಟ್ಟ ಮುಚ್ಚಳಿಕೆ ಪತ್ರವು ಅಪೀಲು ವ್ಯವಹರಣೆ ಕಾಲಾವಧಿ ಮುಗಿದ ನಂತರ ರದ್ದುಗೊಳ್ಳತಕ್ಕದ್ದು.

(ಈ ತೀರ್ಪನ್ನು ಶೀಘ್ರಲಿಪಿಗಾರರಿಗೆ ನೇರವಾಗಿ ಗಣಕಯಂತ್ರದ ಮುಖಾಂತರ ಉಕ್ತಲೇಖನ ನೀಡಿದ ನಂತರ ತಿದ್ದಿ, ತರ್ಜುಮೆ ಮಾಡಿ ನನ್ನ ಸಹಿಯೊಂದಿಗೆ ತೆರೆದ ನ್ಯಾಯಾಲಯದಲ್ಲಿ **ದಿನಾಂಕ 02 ನೇ ಏಪ್ರಿಲ್, 2024** ರಂದು ಘೋಷಿಸಲಾಯಿತು)

**(ಸುರೇಶ ವಗ್ಗನವರ)**
**ದಿವಾಣಿ ಮತ್ತು ಪ್ರಥಮ ದರ್ಜೆ ನ್ಯಾಯಿಕ**
**ದಂಡಾಧಿಕಾರಿಗಳ ನ್ಯಾಯಾಲಯ, ಬ್ಯಾಡಗಿ.**

## ಅನುಬಂಧ

**ಅಭಿಯೋಜನೆ ಪರ ವಿಚಾರಣೆ ಮಾಡಿದ ಸಾಕ್ಷಿಗಳು:**

ಫಿ್ರಾಸಾ- 1 – ಶ್ರೀಮತಿ ಮಲ್ಲಮ್ಮ ಕೆಂಚಪ್ಪ ಕೆಂಚರೆಡ್ಡಿ

**ಆರೋಪಿತನ ಪರ ವಿಚಾರಣೆ ಮಾಡಿದ ಸಾಕ್ಷಿಗಳು:**

- ಇಲ್ಲಾ -

**ಅಭಿಯೋಜನೆ ಪರ ಗುರುತಿಸಲಾದ ದಾಖಲೆಗಳು:**

ನಿ.ಪಿ.1 - ಪಿರ್ಯಾದಿ

ನಿ.ಪಿ.1(ಎ) - ಫಿ್ರಾಸಾ- 1 ರವರ ಸಹಿ

ನಿ.ಪಿ.2 - ಪಂಚನಾಮೆ

ನಿ.ಪಿ.2(ಎ) - ಫಿ್ರಾಸಾ- 1 ರವರ ಸಹಿ

ನಿ.ಪಿ.3 ರಿಂದ 5 - ಭಾವಚಿತ್ರಗಳು.

**ಆರೋಪಿತನ ಪರ ವಿಚಾರಣೆ ಮಾಡಿದ ದಾಖಲೆಗಳು:**

- ಇಲ್ಲಾ -

**ಮುದ್ದೆಮಾಲಿನ ಪಟ್ಟಿ:**

-ಇಲ್ಲಾ-

**(ಸುರೇಶ ವಗ್ಗನವರ)**
**ದಿವಾಣಿ ಮತ್ತು ಪ್ರಥಮ ದರ್ಜೆ**
**ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ,**
**ಬ್ಯಾಡಗಿ.**